# ಅನುಪಮ ಅನುಭಾವಿ ಅಲ್ಲಮಪ್ರಭು

ಕೆ.ಬಿ. ಪ್ರಭುಪ್ರಸಾದ್

(ಡಿಸೆಂಬರ್ ೨೦೦೮ ರ ಸಂಚಿಕೆಯಿಂದ)

**ಆ**ಧ್ಯಾತ್ಮಿಕ ಸಾಧನೆಯ ಒಂದೊಂದು ಹೆಜ್ಜೆಯೂ ಕಷ್ಟಸಾಧ್ಯ. ಈ ಹಾದಿಯಲ್ಲಿ ಮುಂದೆ ನಡೆದವರ ಮಾರ್ಗದರ್ಶನ, ನೆರವು ಬೇಕು. ಅಲ್ಲಿಯವರೆಗೆ ತೊಳಲಾಟ ತಪ್ಪದು.

ಅರಸಿ ಅರಸಿ ಹಾ ಹಾ ಎನುತಿದ್ದೆನು
ಬೆದಕಿ ಬೆದಕಿ ಬೆದ ಬೆದ ಬೇವುತಿದ್ದೆನು
ಗುಹೇಶ್ವರಾ ಕಣ್ಣ ಮೊದಲಲ್ಲಿದ್ದವನ ಕಾಣೆನು. (೮೨೦)

ಗುರುವನ್ನಾಗಲಿ, ದೇವರನ್ನಾಗಲಿ ಹೊರಗೆಲ್ಲೆಲ್ಲೊ ಹುಡುಕುತ್ತ ಅಲೆಯುವುದು ವ್ಯರ್ಥ ಶ್ರಮ ಎಂದು ಅಲ್ಲಮನಿಗೆ ಅನಿಸಿತು.

ಸುತ್ತಿ ಸುತ್ತಿ ಬಂದಡಿಲ್ಲ ಲಕ್ಷ ಗಂಗೆಯ ಮಿಂದಡಿಲ್ಲ
ತುಟ್ಟತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ
ನಿತ್ಯನೇಮದಿಂದ ತನುವ ಮುಟ್ಟಿಕೊಂಡಡಿಲ್ಲ. (೩೫೧)

ಘೋರವಾಗಿ –

ಗಿರಿಯ ಕೋಡುಗಲ್ಲ ಮೇಲೆ
ತಲೆಯೂರಿ ತಪಸ್ಸು ಮಾಡಿದಡಿಲ್ಲ

ಯಾಂತ್ರಿಕ ಜಪ–ತಪಗಳಿಗೆ, ತೋರಿಕೆಯ ಭಕ್ತಿಗೆ, ವ್ರತ ನೇಮಾದಿ ಆಡಂಬರದ ಪೂಜೆಗೆ ಒಲಿಯುವವನಲ್ಲ ದೇವರು ಎಂಬ ಅರಿವೇನೊ ಇತ್ತು. ಸಾಧನಾ ಪಥದಲ್ಲಿ ನಡೆಸಬಲ್ಲ ಕರುಣಾಮಯನಾದ ಗುರುವನ್ನು ಹುಡುಕಬೇಕೆನಿಸಿತು. ಆರ್ತನಾಗಿ ದೇವರನ್ನು ಬೇಡುವುದೊಂದೇ ದಾರಿ. ಹಸಿವು – ನೀರಡಿಕೆ –ನಿದ್ದೆ ಎಲ್ಲ ಮರೆತು ಅಲ್ಲಮ ವ್ಯಾಕುಲಿತನಾದ.

ಉಗುಳ ನುಂಗಿ ಹಸಿವ ಕಳೆದು
ತೆವರ ಮಲಗಿ ನಿದ್ದೆಗೆಯ್ದು
ನೋಡಿ ನೋಡಿ ಸುಖಂಬಡೆದೆನಯ್ಯಾ
ಗುಹೇಶ್ವರಾ ನಿಮ್ಮ ವಿರಹದಲ್ಲಿ ಕಂಗಳೆ ಕರುವಾಗಿರ್ದೆನಯ್ಯಾ
(೩೬೮)

ಆದರೂ ಶಿವನೇಕೆ ಇನ್ನೂ ಒಲಿಯದೆ ಮಿಂಚಿ ಮಾಯವಾಗುತ್ತಿರುವನು? ಗುರುವಿಗೇ ಶರಣಾಗಿ ಕೇಳಿಕೊಳ್ಳುತ್ತಾನೆ:

ನೀನೆನಗೆ ಗುರುವಪ್ಪಡೆ ನಾ ನಿನಗೆ ಶಿಷ್ಯನಪ್ಪೊಡೆ
ಎನ್ನ ಕರಣಾದಿ ಗುಣಂಗಳ ಕಳೆದು
ಎನ್ನ ಕಾಯ ಧರ್ಮವ ತೊಡೆದು
ನೀನೆನ್ನ ಕಾಯದಲಡಗಿ ನೀನೆನ್ನ ಪ್ರಾಣದಲಡಗಿ
ನೀನೆನ್ನ ಭಾವದಲ್ಲಡಗಿ ನೀನೆನ್ನ ಕರಸ್ಥಲಕ್ಕೆ ಬಂದು
ಕಾರುಣ್ಯವ ಮಾಡು ಗುಹೇಶ್ವರಾ

ಎಲ್ಲವನ್ನೂ ತೊರೆದು ನೀನೆ ಗತಿ, ನೀನೆ ಮತಿ ಎಂದು ಇಷ್ಟಲಿಂಗವ ಪಿಡಿದು ಅನನ್ಯ ಮನದಿಂದ ಪೂಜಿಸಿದರೂ, ಧ್ಯಾನಿಸಿದರೂ, ಬೇಡಿದರೂ, ದರ್ಶನ–ಆನಂದಾನುಭವಗಳನ್ನು ಕರುಣಿಸದಿದ್ದರೆ ಇಷ್ಟೆಲ್ಲ ಪಾಡು ಪಡುವುದೇಕೆ ಎಂಬ ಘೋರ ಹತಾಶ ಭಾವದಲ್ಲಿ ಜಿಕ್ಕಿಸಿ ಕೇಳುತ್ತಾನೆ :

ಮೇರುವ ಸಾರಿದ ಕಾಗೆ ಹೊಂಬಣ್ಣವಾಗದಿದ್ದಡೆ
ಆ ಮೇರುವಿಂದತ್ತಣ ಹುಲು ಮೊರಡಿಯೆ ಸಾಲದೆ?
ದೇವಾ ನಿಮ್ಮ ಪೂಜಿಸಿ ಧಾವತಿಗೊಂಬಡೆ
ಆ ಧಾವತಿಯಿಂದ ಮುನ್ನಿನ ವಿಧಿಯೆ ಸಾಲದೆ?
ಗುಹೇಶ್ವರಾ ನಿಮ್ಮ ಪೂಜಿಸಿ ಸಾವಡೆ
ನಿಮ್ಮಿಂದ ಹೊರಗಣ ಜವನೆ ಸಾಲದೆ? (೬೬)

ಹೀಗೆಂದರೂ ಶಿವಯೋಗಸಾಧನೆಯನ್ನು ಇನ್ನೂ ತೀವ್ರಗೊಳಿಸಿ ಮುಂದುವರಿಸುತ್ತಾನೆ. ಆಗ, **"ತನ್ನ ತಾನರಿದಡೆ ತನ್ನರಿವೆ ಗುರು"** ಎಂಬ ಹೊಳಹು ಮೂಡುತ್ತದೆ.

ಮುಂದೆ ಶರಣರೆಲ್ಲರಿಗೂ ಗುರುವಾದಾಗ ಇದನ್ನೆ ಒತ್ತಿ ಹೇಳುತ್ತಾನೆ –

ನಿಮ್ಮಲ್ಲಿ ನೀವು ತಿಳಿದು ನೋಡಿರೆ ಅನ್ಯವಿಲ್ಲ ಕಾಣಿರಣ್ಣ
ಅರಿವು ನಿಮ್ಮಲ್ಲಿಯೆ ಹೃದ್ಗತವಾಗಿಯದೆ. (೩೭೬)

ಅಷ್ಟೇ ಅಲ್ಲ –

ನೀನೇ ಸ್ವಯಂ ಜ್ಯೋತಿ ಪ್ರಕಾಶನೆಂದರಿಯಲು
ನಿನಗೆ ನೀನೆ ಗುರುವಲ್ಲದೆ
ನಿನ್ನಿಂದಧಿಕಮಪ್ಪ ಗುರು ಉಂಟೆ?

ಆದ್ದರಿಂದ ಏಕಮನಸ್ಕನಾಗಿ ಅಂತರ್ಮುಖಿಯಾಗಬೇಕು ಎಂಬ ಋಷಿ ವಾಣಿ ಕೇಳಿದಂತಾಗುತ್ತದೆ –

ಏನ ಕಂಡಡೇನಯ್ಯ ತನ್ನ ಕಾಣದಾತ ಕುರುಡ
ಏನ ಕೇಳಿದಡೇನಯ್ಯ ತನ್ನ ಕೇಳದಾತ ಕಿವುಡ

ತನ್ನ ತಾನರಿವ ಸತತ ಪ್ರಯತ್ನ ಅಗತ್ಯ.

ಮಣಿಯನೆಣಿಸಿ ಕಾಲವ ಕಳೆಯಬೇಡ
ಕಣೆಯ ಪೂಜಿಸಿ ದಿನವ ಕಳೆಯಬೇಡ
ಕ್ಷಣವಾದಡೆಯೂ ಆಗಲಿ ನಿಜದ ನೆನಹೆ ಸಾಕು

ಆ ನೆನಹಿಗೆ ಮನವನ್ನು ಅನುಗೊಳಿಸಬೇಕು.

**ಮಾಯಾಮಲಿನದಿಂದಗಲದೆ, ಕಾಯದ ದಂದುಗ ಕಳೆಯಿಂದಗಲದೆ**
**ಅರಿವು ಬರಿದೆ ಬಪ್ಪುದೆ? ನಿಜವು ಬರಿದೆ ಸಾಧ್ಯವಪ್ಪುದೆ?**
(೩೭೩)

ಆದ್ದರಿಂದ

**ಅತ್ತಲಿತ್ತ ಹರಿವ ಮನವ ಚಿತ್ತದಲ್ಲಿ ನಿಲಿಸಬಲ್ಲಡೆ**
**ಬಚ್ಚ ಬರಿಯ ಬೆಳಗು**

ಎಂಬ ಅನುಭವವೂ ಆಯಿತು.

ಸಾಧನೆ ಅಂತರಂಗದಲ್ಲಿ ನಿರಂತರವಾಗಿ ನಡೆಯುತ್ತಿರುವಾಗ ಪ್ರಾಪಂಚಿಕ ಪ್ರಲೋಭನೆಗಳ ತೀವ್ರತೆ ಹೆಚ್ಚು. ಅಂತಹ ಹಂತ ದಲ್ಲಿರುವಾಗ ಅಲ್ಲಮ ಕಾಮನಿಗೇ ಸವಾಲು ಹಾಕುತ್ತಾನೆ –

**ಎಸೆಯದಿರು ಎಸೆಯದಿರು ಕಾಮಾ**
**ನಿನ್ನ ಬಾಣ ಎಸೆಯಲೇಕೊ? ........**
**ಗುಹೇಶ್ವರಲಿಂಗದ ವಿರಹದಲ್ಲಿ ಬೆಂದವರ**
**ಮರಳಿ ಸುಡಲುಂಟೆ ಮರುಳು ಕಾಮಾ!** (೧೪೭)

ಅನಿಮಿಷ ಗುರುವಿನಿಂದ ಪಡೆದ ದೀಕ್ಷೆ ಮತ್ತು ಇಷ್ಟಲಿಂಗ, ಅಲ್ಲಮನನ್ನು ಸಂಪೂರ್ಣವಾಗಿ ಭಕ್ತಿ ಭಾವದಲ್ಲಿ ಮುಳುಗಿಸಿತು. ಮೊದಲ ಹಂತವಾದ ಭಕ್ತ ಸ್ಥಲದಲ್ಲಿ ಶ್ರದ್ಧೆ ನೆಲೆಗೊಳ್ಳುತ್ತ –

**ಕಾಣಬಾರದ ಲಿಂಗವು ಕರಸ್ಥಲಕ್ಕೆ ಬಂದಡೆ**
**ಎನಗಿದು ಸೋಜಿಗ! ಎನಗಿದು ಸೋಜಿಗ!** (೬೦)

ಎನಿಸುತ್ತದೆ. ಶರಣರ ಸತ್ಸಂಗ ಶ್ರದ್ಧೆಗೆ ಬಲ ನೀಡುತ್ತದೆ.

**ಲಿಂಗಾನುಭವಿಗಳ ಸಂಗದಿಂದಾನು**
**ಕಣ್ದೆರೆದೆನು ಕಾಣಾ ಗುಹೇಶ್ವರ** (೯೪)

ಕಣ್ದೆರೆದುದು ಲಿಂಗದೊಲವಿಗೆ; ಅಂತರಂಗದಲ್ಲಿ ತನ್ನ ಮತ್ತು ಲಿಂಗದ ಸಂಬಂಧ 'ಶಬ್ದದೊಳಗಣ ನಿಶ್ಶಬ್ದ' ದಂತೆ ಎಂಬ ಅರಿವಿಗೆ. ಬಾಹ್ಯದಲ್ಲಿ ಇಷ್ಟಲಿಂಗವನ್ನೆ ಎವೆಯಿಕ್ಕದೆ ನೋಡುವ ದೃಷ್ಟಿಯೋಗದಿಂದ

**ಎನ್ನ ಕರಸ್ಥಲದ ಲಿಂಗದೊಳಗೆ**
**ಒಂದು ಮಹಾ ಬೆಳಗ ಕಂಡೆನಯ್ಯ!**

ಹೀಗೆ ಕಂಡ ಆನಂದದ ಸ್ಥಿತಿಯೂ ಬಂದು ಹೋಯಿತು. ಆಗ:

**ಎನ್ನೊಳಗೆ ಅರಿವಿನ ಪರಿಮಳ**
**ಹೊರಗೆ ನೋಡಿದಡೆ ಮುಗ್ಧವಾಯಿತ್ತು.**

ಇದು ಮಾತಿಗೆ ಮೀರಿದುದು.

ಪ್ರಾಣಲಿಂಗದ ಉಪಾಸನೆಯಲ್ಲಿ

**ಎನ್ನ ಮನದ ಕೊನೆಯ ಮೊನೆಯ ಮೇಲೆ**
**ಅಂಗವಿಲ್ಲದ ರೂಪನ ಕಂಡು ಮರುಳಾದೆನವ್ವಾ!**
**ಆತನ ಕಂಡು ಬೆರಗಾದೆನವ್ವಾ**
**ಎನ್ನಂತರಂಗದ ಆತುಮದೊಳಗೆ**
**ಅನಿಮಿಷ ನಿಜೈಕ್ಯ ಗುಹೇಶ್ವರನ ಕಂಡು!** (೨೦೫)

ಇಲ್ಲಿ 'ಶರಣ ಸತಿ'ಯ ಭಾವವೂ ಇದೆ. ಶರಣ ಸತಿಗೆ ದ್ವೈತಭಾವದಲ್ಲಿ ಸುಂದರವಾದ ರೂಪ; ಅದ್ವೈತ ಭಾವದಲ್ಲಿ ನಿರಾಕಾರ, ಬಯಲು!

**ನೋಡುವಡೆ ಕಾಣಬರುತ್ತಿದೆ, ಮುಟ್ಟುವಡೆ ಕೈಗೆ ನಿಲುಕದು**
**ಹೊದ್ದುವಡೆ ಸಮೀಪ, ಸಾರಿದಡೆ ಅತ್ತತ್ತ ತೋರುತ್ತಿದೆ.**
**ಆಕಾರ ನಿರಾಕಾರವ ನುಂಗಿ ..........**
**ದರ್ಶನದಿಂದ ಅಮೃತಾಹಾರವಾಯಿತ್ತು**
**ಬೆರಸಿದಡೆ ಇನ್ನೆಂತೊ ಗುಹೇಶ್ವರ** (೧೬೦೪)

ಇನ್ನೊಂದು ವಚನದಲ್ಲಿ ಇನ್ನೂ ಪ್ರಕಟವಾಗಿ –

**ನಿಮ್ಮ ತೇಜವ ನೋಡಲೆಂದು ಹೊರಸಾರಿ ನೋಡುತ್ತಿರಲು**
**ಶತಕೋಟಿ ಸೂರ್ಯರು ಮೂಡಿದಂತೆ ಇರ್ದುದಯ್ಯ!**
**............................**
**ಗುಹೇಶ್ವರಾ ನೀನು ಜ್ಯೋತಿರ್ಲಿಂಗವಾದಡೆ**
**ಉಪಮಿಸಿ ನೋಡಬಲ್ಲವರಿಲ್ಲವಯ್ಯಾ**

ಎಂದರೂ ಶಿವಯೋಗದ ಉನ್ನತ ಸ್ಥಿತಿಯ ಈ ಅನುಭವಕ್ಕೆ ಶತಕೋಟಿ ಸೂರ್ಯ ಪ್ರಕಾಶದ ಉಪಮೆ ಬೇಕು.

ಈ ಹಂತದ ಭಕ್ತಿಗೆ, ಪೂಜೆಗೆ ಬಹು ಸೊಗಸಾದ ನಿದರ್ಶನ ಈ ಕೆಳಗಿನ ವಚನ :

**ಅಗ್ಘವಣಿಯ ತಂದು ಮಜ್ಜನವ ಮರೆದವನ**
**ಪುಷ್ಪವ ತಂದು ಪೂಜೆಯ ಮರೆದವನ**
**ಲಿಂಗವ ಕಂಡು ತನ್ನ ಮರೆದವನ**
**ಮಹಾಘನ ಒಳಕೊಂಡಿತ್ತು ಗುಹೇಶ್ವರ**

ಭಕ್ತಿ ಪರವಶತೆಯ ತನ್ನ ಭಾವವನ್ನೆ ಅಲ್ಲಮ ಇಲ್ಲಿ ನಿವೇದಿಸಿ ದ್ದಾನೆ.

ಇದೆಲ್ಲ ಇನ್ನೂ ಮನ – ಅತ್ತಿತ್ತ ಹರಿಯದೆ ಸುಚಿತ್ತದಲ್ಲಿ ನಿಂತ ನಿರ್ಮಲ ಮನ – ಮನವಾಗಿಯೆ ಇದ್ದ ಸ್ಥಿತಿ. ನಂತರ ಅಲ್ಲಮ ಮನೋಲಯದ ಸಾಧನೆಗೆ ತೊಡಗುವನು. ಮನವೇ ಇಲ್ಲದ **'ಅಮನ'** ಸ್ಥಿತಿ – ('ಚಿತ್ತವೃತ್ತಿ ನಿರೋಧ'ದ ಯೋಗವಲ್ಲ) ಸರ್ವೇಂದ್ರಿಯಗಳನ್ನೂ ಉದಾತ್ತೀಕರಿಸಿ ಲಿಂಗ ಭಾವದಲ್ಲಿರಿಸುವ ಶಿವಯೋಗ ಇದು.

**ಸ್ವಸ್ಥಾನ ಸುಸ್ಥಿರದ ಸುಮನ ಮಂಟಪದೊಳಗೆ**
**ನಿತ್ಯ ನಿರಂಜನ ಪ್ರಭೆಯೊಳಗೆ**
**ಶಿವಯೋಗದನುಭಾವವೇಕಾರ್ಥವಾಗಿ**
**ಗುಹೇಶ್ವರಾ ನಿಮ್ಮ ಶರಣನನುಪಮ ಸುಖಿಯಾಗಿರ್ದನು** (೨೩೨)

ಇಲ್ಲಿ **'ಅಮನ ಸ್ಥಿತಿ'**ಯೆ ಸುಮನ ಮಂಟಪ. ಅದು ಅತಿ ಮಾನಸ ಸ್ತರ. ಅದರ ಅನುಭಾವವನ್ನು **'ಬಯಲ ಬೆರಗಿನ ಸುಖದ ಸವಿಯ ಬೆರಗಲ್ಲದೆ ಕಾಣೆ'** ಎಂದು ಬಣ್ಣಿಸುತ್ತಾನೆ. ಆ ಸ್ಥಿತಿಯಲ್ಲಿ ಆಗುವ ಪ್ರಾಣಲಿಂಗದ ಪೂಜೆ: –

ಪ್ರಾಣಲಿಂಗಕ್ಕೆ ಕಾಯವೆ ಸೆಜ್ಜೆ
ಆಕಾಶಗಂಗೆಯಲ್ಲಿ ಮಜ್ಜನ
ಹೂವಿಲ್ಲದ ಪರಿಮಳದ ಪೂಜೆ
ಹೃದಯ ಕಮಲದಲ್ಲಿ ಶಿವ ಶಿವಾ ಎಂಬ ಶಬ್ದ! (೧೯೮)

ಇನ್ನು ಭಾವಲಿಂಗದ ಪೂಜೆ ಹೇಗಿರಬೇಕು! ಮತ್ತೂ ಅದ್ಭುತ, ಭವ್ಯ ಹಾಗೆಯೆ ದಿವ್ಯ! :

ಗಗನವೆ ಗುಂಡಿಗೆ ಆಕಾಶವೆ ಅಗ್ಘವಣಿ,
ಚಂದ್ರಸೂರ್ಯರಿಬ್ಬರೂ ಪುಷ್ಪ; ಬ್ರಹ್ಮ ಧೂಪ, ವಿಷ್ಣು ದೀಪ,
ರುದ್ರನೋಗರ! ಸುಯಿಧಾನ ನೋಡಾ
ಗುಹೇಶ್ವರಲಿಂಗಕ್ಕೆ ಪೂಜೆ ನೋಡಾ (೪೧೫)

ಭಕ್ತಿಯ ಅತ್ಯುನ್ನತ ಅನುಭಾವವಿದು. ಈಗ ಇನ್ನೂ ಮುಂದಿನ ಹಂತ –

ಕರಸ್ಥಲದ ಲಿಂಗ ಮನಸ್ಥಲದಲ್ಲಿ ವೇದ್ಯವಾಗಿ
ಮನಸ್ಥಲದ ಲಿಂಗ ಎನ್ನ ಸರ್ವಾಂಗದಲ್ಲಿ ವೇದ್ಯವಾದ ಬಳಿಕ
ಇನ್ನು ಭಿನ್ನ ಭಾವಕ್ಕೆ ತೆರಹುಂಟೆ?
ಗುಹೇಶ್ವರ ಲಿಂಗವ ಬೆರಸಿ
ಸಮರಸವಾದ ಬಳಿಕ ಎರಡೆಂಬುದಿಲ್ಲ." (೧೦೫೯)

"ಇಂತೀ ಷಡ್ವಿಧಲಿಂಗವನು ಎನ್ನ ಸರ್ವಾಂಗದಲ್ಲಿ ಕಂಡು
ಮಹಾಲಿಂಗವಾದೆನು ಕಾಣಾ ಗುಹೇಶ್ವರಾ."

ಸಾಧನೆಯ ಪ್ರಗತಿಗೆ ಕೊನೆಯವರೆಗೂ, ಉನ್ನತ ಹಂತ ದಲ್ಲೂ, ಮಾಯೆಯೊಡ್ಡುವ ಅಡ್ಡಿಗಳಲ್ಲಿ ಅತ್ಯಂತ ಸೂಕ್ಷ್ಮವೂ, ದಾಟಲು ಕಠಿಣವೂ ಆದ ತೊಡರೆಂದರೆ 'ಅಹಂಕಾರ'. ಕಡೇ ಘಟ್ಟದಲ್ಲಿ ಅಹಂಕಾರವನ್ನು ಪೂರ್ಣವಾಗಿ ತೊರೆದೆನೆಂದರೂ, ಮಾಯೆಯನ್ನು ಗೆದ್ದೆ ಎಂಬ ಅಹಂಕಾರ ತಲೆದೋರುವುದು. ಅಲ್ಲಮ ತನ್ನಲ್ಲೇ ಇದನ್ನು ಸೂಕ್ಷ್ಮವಾಗಿ ಗಮನಿಸಿ ಹೇಳುತ್ತಾನೆ–

ಅದ್ವೈತವ ನುಡಿದು ಅಹಂಕಾರಿಯಾದೆನಯ್ಯಾ
ಬ್ರಹ್ಮವ ನುಡಿದು ಭ್ರಮಿತನಾದೆನಯ್ಯಾ
ಶೂನ್ಯವ ನುಡಿದು ನಾನು
ಸುಖ–ದುಃಖಕ್ಕೆ ಗುರಿಯಾದೆನಯ್ಯ (೮೫)

ಅಹಂಕಾರ ಮತ್ತು ವಾಗಾಡಂಬರ ಬಹು ಸೂಕ್ಷ್ಮ ಪ್ರಮಾಣ ದಲ್ಲಿದ್ದರೂ, ಅವು ಇರುವ ತನಕ ಅನುಭಾವ ಪೂರ್ಣವಲ್ಲ. ಮತ್ತೆ ಸುಖ–ದುಃಖ, ಹಿಗ್ಗುವ ಕುಗ್ಗುವ ಸ್ಥಿತಿ, ಮಾಯೆ ಗೊಳಗಾಗಿಲ್ಲ ಎಂಬ ಭ್ರಮೆ ತಪ್ಪಿದ್ದಲ್ಲ. ಈ ಸೂಕ್ಷ್ಮ ಅಹಂಕಾರ ವನ್ನು ಅಲ್ಲಮ ಭಕ್ತಿ–ಶರಣಾಗತಿಗಳ ಪುಣ್ಯಜಲದಲ್ಲಿ ಕರಗಿಸಿ ಗುಹೇಶ್ವರನ ಪಾದಕ್ಕೆರೆಯುತ್ತಾನೆ.

ಸರ್ವಾಂಗವೂ ಲಿಂಗವೇ ಆದ ಸ್ಥಿತಿಯ ಅನುಭಾವದಲ್ಲಿ ಎಲ್ಲ ಭಿನ್ನತೆಗಳೂ ಅಳಿದುಹೋಗಿ ಲಿಂಗವೇ ಪ್ರಾಣ, ಪ್ರಾಣವೇ ಲಿಂಗ ಆಗುವುದು. ಈ ಅನುಭಾವಕ್ಕಿನ್ನೊಂದು ಅದ್ಭುತವಾದ ಪ್ರತಿಮೆ, ಅನ್ಯಾದೃಶ ವಚನ:

ಹರಿವ ನದಿಗೆ ಮೈಯೆಲ್ಲ ಕಾಲು
ಉರಿವ ಕಿಚ್ಚಿಗೆ ಮೈಯೆಲ್ಲ ಕೈ ಗುಹೇಶ್ವರಾ
ನಿಮ್ಮ ಶರಣಂಗೆ ಸರ್ವಾಂಗವೆಲ್ಲ ಲಿಂಗ. (೧೬೧೬)

ಅಷ್ಟೇ ಅಲ್ಲ, **"ಮರದೊಳಗಣ ಕಿಚ್ಚು ಮರನ ಸುಟ್ಟಂತಾದೆನಯ್ಯ"; "ಗುಹೇಶ್ವರನೆಂಬ ಲಿಂಗವ ಪೂಜಿಸಿ ಭವಗೆಟ್ಟೆನಯ್ಯ"; "ಸ್ವಾನುಭವದ ಜ್ಞಾನಜ್ಯೋತಿ ಭಾನುಕೋಟಿಯ ಮೀರಿತ್ತು"; "ಕರ್ಪೂರದ ಗಿರಿಯ ಉರಿ ಹಿಡಿದಡೆ ಇದ್ದಿಲುಂಟೆ? ಮಂಜಿನ ಶಿವಾಲಯಕ್ಕೆ ಬಿಸಿಲ ಕಳಸವುಂಟೆ?", "ಸ್ವಾನುಭವವು ಶೂನ್ಯ ದಲ್ಲಡಗಿದ ಘನವೇನೆಂಬೆ ಗುಹೇಶ್ವರ", "ಎಂತಿದ್ದುದು ಅಂತೆ ಇದೆ ಚಿಂತೆಯಿಲ್ಲದನುಭಾವ ಗುಹೇಶ್ವರಾ"** – ಹೀಗೆ ಭಕ್ತಿ–ಜ್ಞಾನ–ಕರ್ಮ–ಯೋಗಮಾರ್ಗಗಳನ್ನು ಷಟ್ಸ್ಥಲಮಾರ್ಗದ ಶಿವಯೋಗದಲ್ಲಿ ಅಲ್ಲಮಪ್ರಭು ಹದವಾಗಿ ಸಮನ್ವಯಗೊಳಿಸಿ ಶರಣರೆಲ್ಲರಿಗೆ ದಾರಿ ತೋರುತ್ತಾನೆ.

ಅನುಭಾವ ಸ್ಥಿತಿಯನ್ನು ಮಾತುಗಳ ಮಿತಿಯಲ್ಲೆ ಆದರೂ ಹೇಳುವಷ್ಟನ್ನೂ ಹೇಳಲೆಳಸಿದ ನಿದರ್ಶನ ಲೋಕದ ಬೇರೆ ಯಾವ ಭಾಷೆಯಲ್ಲೂ ಇದ್ದಂತೆ ಕಾಣುವುದಿಲ್ಲ. ಜೀವನ್ಮುಕ್ತನಾಗಿ, ಅನುಪಮ ಚರಿತ್ರನೆನಿಸಿದ ಅಲ್ಲಮಪ್ರಭುದೇವನನ್ನು ಅವನ ಸಮಕಾಲೀನರೇ ಅವತಾರಪುರುಷ, ಸಾಕ್ಷಾತ್ ಶಿವಸ್ವರೂಪಿ ಎಂದು ಭಾವಿಸಿದುದರಲ್ಲಿ ಆಶ್ಚರ್ಯವೇನಿಲ್ಲ. ಆತ ತನ್ನ ಅನುಭಾವದ ಬೆಳಕನ್ನು ಅಗತ್ಯವಿರುವ ಇತರ ಶರಣ ಸಾಧಕ ರೆಲ್ಲರೊಂದಿಗೆ ಹಂಚಿಕೊಳ್ಳುತ್ತಾನೆ; ಅದು ಅವರಿಗೆ ದಾರಿ ಬೆಳಕಾಗಿ ಅನುಕೂಲವಾಗಬಹುದೆಂಬ ಸದಾಶಯದಿಂದ, ಶಿವ ಯೋಗಮಾರ್ಗದ ಶರಣರ ಅಂತರಂಗದ ಕರೆಗೂ ಓಗೊಟ್ಟವ ನಂತೆ, ಅವರನ್ನರಸಿಕೊಂಡು ಹೊರಡುತ್ತಾನೆ. ಆ ರೋಮಾಂಚ ಕಾರಿ ವೃತ್ತಾಂತವೆ ಮತ್ತೊಂದು ಸ್ವಾರಸ್ಯವಾದ ಅಧ್ಯಾಯ.

ಅನುಭಾವದ ಅತ್ಯುನ್ನತ ಶಿಖರಕ್ಕೇರಿ, ಸಾಮಾನ್ಯವಾದ ಆಡುಮಾತುಗಳಿಗೆ, ಅಮೂರ್ತವೂ ದಿವ್ಯವೂ ಆದ ಅನು ಭಾವವನ್ನು, ಅಭಿವ್ಯಕ್ತಿಸುವ ಶಕ್ತಿಯನ್ನಿತ್ತು **'ಮಾತೆ ಜ್ಯೋತಿ ರ್ಲಿಂಗ'** ವಾಗುವಂತೆ ಮಾಡಿದ, ಅರಿಯದವರಿಗೆ ಅಂಗ ಲಿಂಗದ ರೂಪವಾಗಿ, ಅರಿತವರಿಗೆ ಸತ್–ಚಿತ್–ಆನಂದ ರೂಪವಾಗಿ ತೋರಿದ, ನಡೆದು ನಿರ್ಗಮನಿಯೆನಿಸಿದ, ಕತ್ತಲೆಯ ನುಂಗಿದ ಬೆಳಕಿನಂತೆ ಕಂಗೊಳಿಸಿದ, ಅನುಪಮ ಅನುಭಾವಿ ಅಲ್ಲಮ ಪ್ರಭುವಿನ ಸ್ಮರಣೆ ಮನಸ್ಸನ್ನು ಪಾವನಗೊಳಿಸುವಂತಹದು, ಆತ್ಮವನ್ನು ಜಾಗೃತಗೊಳಿಸಿ ಸಾಧನೆಗೆ ಸ್ಫೂರ್ತಿಯನ್ನು ನೀಡು ವಂತಹದು.

(ಮೇಲಿನ ವಚನಗಳ ಆಧಾರ ಗ್ರಂಥ : **ಅಲ್ಲಮಪ್ರಭುದೇವರ ವಚನ ಸಂಪುಟ, ಸಮಗ್ರ ವಚನ ಸಂಪುಟ, ಸಂಪುಟ – ೨;**
**ಪ್ರಕಾಶಕರು:** ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ)